**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಪಿ.ಡಬ್ಲ್ಯೂ.1–ಬೈರಪ್ಪ** **ಓಎಸ್. 5–13**

**(ಸಾಕ್ಷಿಗೆ ಈ ದಿನ ಅಂದರೆ ದಿಃ 09.04.2018 ರಂದು ಪ್ರಮಾಣ ವಚನ ಬೋಧಿಸಲಾಯಿತು).**

**ಪಾಠಿ ಸವಾಲು ಪ್ರತಿವಾದಿ ಪರ ವಕೀಲರಿಂದಃ–**

ಪ್ರತಿವಾದಿಗಳು ನನ್ನ ಮೇಲೂ ಕೂಡಾ ಓಎಸ್ ನಂ:4/13 ಎಂದು ನನ್ನ ಮೇಲೆ ದಾವೆ ಹಾಕದ್ದಾರೆ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂಬರ್ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯ ಪಕ್ಕದಲ್ಲಿ ಇರುವ ಪ್ರತಿವಾದಿಗಳ ಸ್ವತ್ತು ಗ್ರಾಮ ಠಾಣಾಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಅದು ಸರ್ವೆ ನಂ: 87/3 ಎನ್ನುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಗಳು ಮನೆ ಕಟ್ಟಲು ಪಾಯ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿ ನಾವು ಅದಕ್ಕೆ ತಕರಾರು ಮಾಡಿರುತ್ತೇವೆ ಎನ್ನುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿಯಲ್ಲಿರುವ ಆಸ್ತಿ ನನಗೆ ಸೇರಿದ ಕುರಿತು ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಗಳ ಆಸ್ತಿ ಇದ್ದು, ಸರ್ಕಾರಿ ರಸ್ತೆ ಮತ್ತು ರಚ್ಚೆ ಎಂದು ಸುಳ್ಳಾಗಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ನಮ್ಮ ಹಿರಿಯರಿಂದ ನನಗೆ ಬಂದಿರುತ್ತದೆ. ದಾವಾ ಆಸ್ತಿ ಮೂಲತ: 31 ಗುಂಟೆ ಇದ್ದು, ಅದರಲ್ಲಿ 11 ಗುಂಟೆಯನ್ನು ಚಿಕ್ಕಪ್ಪಣ್ಣ ರವರಿಗೆ ನೀಡಲಾಗಿರುತ್ತದೆ. ಪಹಣಿ ಬಿಟ್ಟು ಬೇರೆ ಮೂಲ ದಾಖಲಾತಿಗಳು ಯಾವು ಇಲ್ಲ ಎಂದರೆ ಸರಿ. ಎಸಿ ನ್ಯಾಯಾಲಯದಲ್ಲಿ ದಾವಾ ಆಸ್ತಿಯಲ್ಲಿನ 20 ಗುಂಟೆ ಜಮೀನಿನಲ್ಲಿ ಒಂದೂವರೆ ಗುಂಟೆ ಪ್ರತಿವಾದಿಗೆ ಸೇರಬೇಕು ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಮೇಲೆ ದಾವೆ ಹಾಕಿದ ಕಾರಣದಿಂದ ಅವರ ಮೇಲೆ ತೊಂದರೆ ನೀಡಲು ಒಂದು ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಠಿ ಸವಾಲಿಗಾಗಿ ಸಮಯ ಕೋರಿದ್ದು, ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು).

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ .**